

# ಲೋಹದ ಹಕ್ಕಿಗಳ ಮ್ಯೂಸಿಯಂ

★ ನಿಸರ್ಗ ಎಚ್.ಮಲ್ಲಿಗೆರೆ

**2016 ಜೂನ್ 1. ಹೆಚ್‌ಎಲ್ ವಿಮಾನ ನಿಲ್ದಾಣ.**

ಭಾರತೀಯ ವೈಮಾನಿಕ ರಂಗದಲ್ಲಿಯೇ ಮೈಲಿಗಲಾಗಬಲ್ಲ ಕ್ಷಣಗಳಿಗೆ ಎಚ್‌ಎಎಲ್ ವಿಮಾನ ನಿಲ್ದಾಣ ಸಾಕ್ಷಿಯಾಯಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ, ಗೃಹ ಸಚಿವರಾದ ರಾಜ್‌ನಾಥ್‌ಸಿಂಗ್, ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ಸೇರಿದಂತೆ ಎಲ್ಲರ ಕಂಗಳು ಅದಾಗಲೇ ಅಲ್ಲಿ ಭೋರ್ಗರೆಯಲು ಸಜ್ಜಾಗಿದ್ದ ಲೋಹದ ಹಕ್ಕಿಯತ್ತ ನೆಟ್ಟಿತ್ತು.

ಕಾತರದ ಕ್ಷಣಗಳು ಬಂದೇ ಬಿಟ್ಟವು. ಗುರಿನೆಟ್ಟಿದ ಆ ಹಕ್ಕಿ ಮುನ್ನುಗಿತ್ತು, ನಭಕ್ಕೆ ಚಿಮ್ಮಿತು. ಹಿಂದೆಯೇ ನೂರಾರು ಮಂದಿಯ ಸಂತಸ ಭರಿತ ಕೇಕೆ, ಕರತಾಡನ. ಅದುವೇ ತೇಜಸ್!

ಸ್ವದೇಶಿ ನಿರ್ಮಿತ ಲಘು ಸಮರ ವಿಮಾನದ ಹಾರಾಟಕ್ಕಾಗಿ ಇಡೀ ದೇಶವೇ ಕಾದು ನಿಂತಿತ್ತು. ಆ ಐತಿಹಾಸಿಕ ಕ್ಷಣಗಳನ್ನು ಭಾರತೀಯ ಸೇನೆಯ ಮೂರೂ ವಿಭಾಗದ ನೂರಾರು ಮಂದಿ ಎವೆ ಇಕ್ಕದೆ ಕಂಡು ಸಂಭ್ರಮಿಸಿದರು. ನಭವನ್ನೇ ಸೀಳಿ ಶರವೇಗವನ್ನು ಮೀರಿ ಸುಯ್ಯನೆ ಸಾಗಿದ ತೇಜಸ್, ಅತ್ತಿತ್ತ ಹೊರಳಿ, ಹೊಯ್ದಾಡಿ ಗಿರಗಿಟ್ಟಲೆ ಹೊಡೆದು, ಆಗಸದಲ್ಲಿಯೇ ಲಾಗ ಹಾಕಿ, ನಾನಾ ಕಸರತ್ತುಗಳನ್ನು ತೋರಿ ಎಚ್‌ಎಎಲ್‌ನ ರನ್‌ವೇಗೆ ಬಂದಿಳಿಯಿತು. ಎಲ್ಲರ ಉದ್ವೇಗದ ಉದ್ಗಾರ 'ವ್ಹಾರೆವ್ಹ'!

***

ಭಾರತೀಯ ವಾಯುಪಡೆ ತುದಿಗಾಲಲ್ಲಿ ನಿಂತು ಕಾಯುತ್ತಿರುವ ಈ 'ತೇಜಸ್' ಸಮರ ಸಂದರ್ಭಗಳಲ್ಲಿ ವೈರಿ ಪಡೆಗಳಿಂದ ನಮ್ಮ ನೆಲ –ಜಲವನ್ನು ಸಂರಕ್ಷಿಸುವಲ್ಲಿ ನಿಸ್ಸಂದೇಹವಾಗಿ ಪ್ರಮುಖ ಪಾತ್ರ ವಹಿಸಲಿದೆ. ಆಧುನಿಕ ಸಮರ ವಿಮಾನಗಳಲ್ಲಿಯೇ ಅದ್ಭುತವಾದ ತೇಜಸ್ ಸೃಷ್ಟಿಯವರೆಗೆ ವೈಮಾನಿಕ ರಂಗ ಸಾಗಿ ಬಂದದ್ದು ಹೇಗೆ?

ಈ ಪ್ರಶ್ನೆಗೆ ಉತ್ತರ ಹುಡುಕಲು ಗ್ರಂಥಾಲಯಗಳಿಗೆ ಹೊಕ್ಕು ನೂರೆಂಟು ಪುಸ್ತಕಗಳನ್ನು ತಡೆವಿಕೊಳ್ಳುವ ಅಗತ್ಯವಿಲ್ಲ, ಇಲ್ಲವೇ ಅಂತರ್‌ಜಾಲದ ಒಳಹೊಕ್ಕು ಜಾಲಾಡಬೇಕಾದ ಅನಿವಾರ್ಯತೆಯೇ ಇಲ್ಲ. ವೈಮಾನಿಕ ರಂಗದ ಸಾಧನೆಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡಬಲ್ಲ ವಸ್ತುಸಂಗ್ರಹಾಲಯವೊಂದು ಬೆಂಗಳೂರಿನ ಎಚ್‌ಎಎಲ್‌ನ ವಿಶಾಲ ಪ್ರದೇಶದಲ್ಲಿರುವ 'ಹೆರಿಟೇಜ್ ಸೆಂಟರ್ ಮತ್ತು ಏರೊಪ್ಲೇನ್ ಮ್ಯುಸಿಯಂ' ಎಲ್ಲರನ್ನು ಸೆಳೆಯುತ್ತದೆ.

2001 ರಲ್ಲಿ ಆರಂಭವಾದ ಈ ಮ್ಯೂಸಿಯಂ ಆರು ದಶಕಗಳ ಭಾರತೀಯ ವೈಮಾನಿಕ ಕ್ಷೇತ್ರದ ಸಾಧನೆಯನ್ನು ಛಿತ್ತರಿಸುತ್ತದೆ. ಇಲ್ಲಿ 1940 ರಿಂದ 2015 ರವರೆಗಿನ ಎಚ್‌ಎಎಲ್‌ನ ಕಾರ್ಯವೈಖರಿ, ವಿವಿಧ ವಿಭಾಗಗಳು, ಎಚ್‌ಎಎಲ್‌ನ ಮೈಲಿಗಲ್ಲು, ಪ್ರಮುಖ ವ್ಯಕ್ತಿಗಳ ಚಿತ್ರಗಳನ್ನು ಇಡಲಾಗಿದೆ.

'ಈಗೆಲ್ಲ ಮಕ್ಕಳಿಗಾಗ ರೂಪುಗೊಂಡ ಗೇಮ್‌ಗಳು, ಕಾರ್ಟೂನ್ ಶೋಗಳಲ್ಲಿ ವಿಮಾನಗಳಿರುವುದು ಮಾಮೂಲಿ. ಪರದೆಯ ಮೇಲೆ ಕಂಡು ರೋಮಾಂಚನಗೊಳ್ಳುವ ಮಕ್ಕಳಿಗೆ ಹತ್ತಿರದಿಂದ ವಿಮಾನ ತೋರಿಸಲು

